**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **09.12.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರಃ ಶ್ರೀ ಹೆಚ್.ಇ.ಆರ್. ವಕೀಲರಿಂದ:</u>**

ಈ ದಾವೆಯ ಎಲ್ಲಾ ವಿಚಾರಗಳು ನನಗೆ ಗೊತ್ತಿರುತ್ತದೆ. ಸರ್ವೆ ನಂ.100 ರಲ್ಲಿ ಒಟ್ಟು 4 ಎಕರೆ 21 ಗುಂಟೆ ಸ್ವತ್ತು ಇತ್ತು. ಎ.ಡಿ.ಎಲ್.ಅರ್ ರವರು ನಾವು ಮಾಡಿಸಿದ್ದ ನಕಾಶೆಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ವಜಾ ಮಾಡಿರುವುದಿಲ್ಲವೆಂದು ನುಡಿದಿರುತ್ತಾರೆ. ಎ.ಡಿ.ಎಲ್.ಅರ್ ರವರು 1 ಎಕರೆಯನ್ನು ಕಳೆದು 27 ಗುಂಟೆ ಆದೇಶ ಮಾಡಿರುತ್ತಾರೆ. 13 ಗುಂಟೆಯನ್ನು ಎ.ಡಿ.ಎಲ್.ಅರ್ ರವರು ಕಳೆದಿರುತ್ತಾರೆ ಎಂದರೆ ಸರಿ. ನಾವು ಹೆಚ್ಚುವರಿಯಾಗಿ ವಿಸ್ತೀರ್ಣವನ್ನು ಸೇರಿಸಿಕೊಂಡಿರುತ್ತೇವೆಂದು 1 ಎಕರೆಯನ್ನು ಕಳೆದಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಕಳೆದಿರುವ 1 ಎಕರೆ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಅದರಲ್ಲಿ 13 ಗುಂಟೆಯನ್ನು ಮತ್ತೇ ಕಳೆದಿರುತ್ತಾರೆ ಎಂದರೆ ಸರಿಯಲ್ಲ. ಡಿ ಡಿ ಎಲ್ ಅರ್ ರವರು ಮಾಡಿದ ನಕಾಶೆಯನ್ನು ಪ್ರಶ್ನೆ ಮಾಡಿದ್ದು, ಅದು ಮಾನ್ಯ ಕೆ ಎ ಟಿ ಯಲ್ಲಿ ಬಾಕಿ ಇರುತ್ತದೆ. ಸದರಿ ಪ್ರಕರಣದ ಅಫೀಲು ಸಂಖ್ಯೆ ನೆನಪಿರುವುದಿಲ್ಲ, ಸದರಿ ಮೇಲ್ಮನವಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

2) ಸ್ವತ್ತನ್ನು ಖರೀದಿ ಮಾಡಲು ನನಗೆ ಕಂಪನಿಯವರು ಅಧಿಕಾರವನ್ನು ನೀಡಿರಲಿಲ್ಲ, ಸತೀಶ್ ಎಂಬುವವರಿಗೆ ಅಧಿಕಾರ ನೀಡಿದ್ದರು. 4 ಎಕರೆ 21 ಗುಂಟೆ ಸ್ವತ್ತನ್ನು ಟಿ.ನಾರಾಯಣ ಎಂಬುವವರಿಂದ ಖರೀದಿ ಮಾಡಿದ್ದೇವು. ಸದರಿ ಸ್ವತ್ತಿನ ಮೂಲ ವಾರಸುದಾರರು ತಮ್ಮಣ್ಣೇಗೌಡ ಮತ್ತು ಪುಟ್ಟತಾಯಮ್ಮ ಅಗಿರುತ್ತಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಸದರಿಯವರು ಪಕ್ಷಗಾರರಾಗಿ ಬರಲು ಅಗತ್ಯತೆ ಇಲ್ಲದ ಕಾರಣ ನಾವು ಅವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. 1ನೇ ಪ್ರತಿವಾದಿಯಿಂದ ಅಬ್ದುಲ್ ಸುಬಾನ್ ರವರು 4 ಎಕರೆ 21 ಗುಂಟೆ ಸ್ವತ್ತನ್ನು ಖರೀದಿ ಮಾಡಿದ್ದರು. ಆ ರೀತಿ ಒಟ್ಟು ವಿಸ್ತೀರ್ಣವನ್ನು ಕ್ರಯಕ್ಕೆ ಪಡೆದ ಬಗ್ಗೆ ದಾಖಲೆ ಇರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ವಿಸ್ತೀರ್ಣಕ್ಕೆ ಸಂಬಂದಿಸಿಂತೆ ಬೇರೆ ಬೇರೆ ಕ್ರಯ ಪತ್ರಗಳು ಇರುತ್ತವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು 3 ಕ್ರಯ ಪತ್ರಗಳ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರಗಳಲ್ಲಿ ನಮೂದು ಮಾಡಿರುವ ಚೆಕ್ಕು ಬಂದಿಯ ಬಗ್ಗೆ ಈಗ ಹೇಳಲಾಗುವುದಿಲ್ಲ. ಪುಟ್ಟತಾಯಮ್ಮ ರವರಿಂದ ನಾವು

ಕ್ರಯಪತ್ರವನ್ನು ಬರೆಸಿಕೊಂಡಿರುವುದಿಲ್ಲ, 1ನೇ ಪ್ರತಿವಾದಿಯು ತಂದೆಯು ಬರೆಸಿಕೊಂಡಿದ್ದರು. 1ನೇ ಪ್ರತಿವಾದಿಯ ತಂದೆಯಿಂದ ಅಬ್ದುಲ್ ಸುಬಾನ್ ರವರು ಕ್ರಯಪತ್ರ ಬರೆಸಿಕೊಂಡಿರತ್ತಾರೆ. ಸದರಿ ಕ್ರಯಪತ್ರದಲ್ಲಿ ಇರುವ ಚೆಕ್ಕು ಬಂದಿ ನೆನಪಿರುವುದಿಲ್ಲ. ನಮ್ಮ ಕಾರ್ಖಾನೆಯಿಂದ ಪಶ್ಚಿಮ ದಿಕ್ಕಿಗೆ ಇರುವ ಸ್ವತ್ತನ್ನು ದಾನ ಪತ್ರ ಮಾಡಿರುತ್ತಾರೆ. ಸದರಿ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ.

ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ